ಆಚರಿಸುತ್ತಾರೆ. ವಿಜಯದಶಮಿಯ ಒಟ್ಟು 9ರಿಂದ 10 ದಿನಗಳವರೆಗೆ ಘಿಸಾಡಿ ಜನರು ಬಹಳ ಸಂತೋಷ, ಸಂಭ್ರಮದಲ್ಲಿರುತ್ತಾರೆ. ಬಹುತೇಕ ಈ ಸಮುದಾಯದ ಜನರು ಅಂಬಾಭವಾನಿ ದೇವಿಯ ಹೆಸರಿನಲ್ಲಿ ಕನಿಷ್ಠ 5ರಿಂದ 9 ದಿನಗಳವರೆಗೆ ದೀಪ ಹಾಕುವ ಕಾರ್ಯಕ್ರಮ ಇಟ್ಟುಕೊಂಡಿರುತ್ತಾರೆ.

ಗಾಣಿಗ ಸಮಾಜವು ಒಂದು ಗಾಣದಿಂದ ತೆಗೆಯಲ್ಪಟ್ಟ ಎಣ್ಣೆಯಿಂದ ಜ್ಯೋತಿ ಬೆಳಗಿಸುವುದು, ದೇವರ ಮುಂದೆ ಆರತಿ ಬೆಳಗಿಸುವುದು ಶುಭಸಂಕೇತದ ಪವಿತ್ರ ಕಾಯಕ. ಇಂದಿಗೂ ಮಹಾನವಮಿ ಹಬ್ಬದಲ್ಲಿ ದೇವರನ್ನು ಶೃಂಗಾರಮಾಡಿ ಕೂಡಿಸಿ ದೇವರ ಮುಂದೆ ಎಣ್ಣೆ ದೀಪದ ಜ್ಯೋತಿ ಬೆಳಗಿಸುವುದು ವಾಡಿಕೆ. ಈ ದೀಪವನ್ನು ಆರದಂತೆ ನೋಡಿಕೊಳ್ಳುತ್ತಾರೆ. ಸಜ್ಜನ ಗಾಣಿಗರಲ್ಲಿ ಕೆಲವರು ಮಹಾನವಮಿ ದಿನದಂದು ಲಕ್ಷ್ಮಿಪೂಜೆ ಮಾಡುತ್ತಾರೆ. ಆಕೆಯನ್ನು ಕರಿಶೀಣಿ 'ಗೊಬ್ಬರವನ್ನು ಉಳ್ಳವಳು' ಎಂದು ಕರೆಯುತ್ತಾರೆ. ಅಂದರೆ, ಭೂಮಿ ಬೆಳೆ ಮತ್ತು ಪ್ರಾಣಿಗಳಿಗೆ ಫಲತ್ವವನ್ನು ಕೊಡುವ ದೇವತೆ ಎಂದರ್ಥ. ಅಲ್ಲದೆ ಲಕ್ಷ್ಮಿ ಸಂಪತ್ತಿನ ಅಧಿದೇವತೆ. ಭಕ್ತರ ಮನೆಗೆ ಪ್ರವೇಶಿಸುತ್ತಾಳೆಂಬ ನಂಬಿಕೆ ಇವರಲ್ಲಿದೆ. ವ್ಯಾಪಾರಸ್ಥರು ತಮ್ಮ ಲೆಕ್ಕದ ಪುಸ್ತಕ ಮತ್ತು ತೂಕದ ಸಾಮಾನುಗಳನ್ನು ಪೂಜಿಸುತ್ತಾರೆ. ಜೊತೆಗೆ ಯಾವುದಾದರೂ ಒಂದು ಹೊಸ ವಸ್ತುವನ್ನು ಸಾಮಾನ್ಯವಾಗಿ ಚಿನ್ನ, ಬೆಳ್ಳಿಯಿಂದ ಮಾಡಿದ ವಸ್ತುಗಳನ್ನು ತರುವ ಸಂಪ್ರದಾಯವಿದೆ.

ಬೇಡಗಂಪಣರು ದಸರಾ ಹಬ್ಬದಲ್ಲಿ ಮಾದೇಶ್ವರನ ದೇವಾಲಯದಲ್ಲಿ ಚಿಕ್ಕ ಸತ್ತಿಗೆ, ದೊಡ್ಡ ಸತ್ತಿಗೆ, ಬೆಳ್ಳಿ ಸತ್ತಿಗೆ, ನಂದಿ ಕಂಬಗಳೊಂದಿಗೆ ಉತ್ಸವಮೂರ್ತಿಯನ್ನು ಮೊದಲ ದಿನ ಸಂಜೆ ಪೂಜೆಯ ನಂತರ ದೇವಾಲಯದ ಗುಡಿಯ ಸುತ್ತ ಮೂರು ಸುತ್ತು ಸುತ್ತಿಸಿ, ನಂತರ ಉತ್ಸವಮೂರ್ತಿಯನ್ನು ಉಯ್ಯಾಲೆಯಲ್ಲಿ ಕೂಡಿಸಿ ಲಾಲಿ ಹಾಡನ್ನು ಹಾಡುವುದರ ಮೂಲಕ ಪೂಜೆ ಮಾಡಲಾಗುತ್ತದೆ.

ಮರಾಠಾ ಸಮುದಾಯದವರು 'ಅಂಗಾರೆ ಪೂಜೆ'ಯ ರೀತಿಯಲ್ಲಿಯೇ ನವರಾತ್ರಿ ಪೂಜೆಯನ್ನು ಆಚರಿಸುತ್ತಾರೆ. ನವರಾತ್ರಿಯ ಏಳನೇ ಅಥವಾ ಒಂಬತ್ತನೇ ಪೂಜೆಯನ್ನು ನಡೆಸುತ್ತಾರೆ. ದೇವಕ್ರಿಯೆಯಲ್ಲಿಯೇ ಶಾರದಾಂಬೆಯನ್ನು ಪೂಜಿಸುವ ಈ ಆಚರಣೆಯು ಮರಾಠಾ ಸಮುದಾಯದವರಿಗೂ ಶೃಂಗೇರಿ ದೇವಾಲಯಕ್ಕೂ ಇರುವ ಸಂಬಂಧವನ್ನು ಸಾರುತ್ತದೆ. ಮಾಂಗ್ ಗಾರುಡಿ ಸಮುದಾಯದ ಸಟಕ್ ಪಂಗಡದವರು ದಸರಾ ಹಬ್ಬಕ್ಕೆ ಹುತ್ತಕ್ಕೆ ಪೂಜೆ ಮಾಡಿ ಹೋತವನ್ನು ಬಲಿಕೊಡುತ್ತಾರೆ. ತಮ್ಮ ವೃತ್ತಿ ಪರಿಕರಗಳಾದ ಖಡ್ಗ, ಎಮ್ಮೆಯ ಕೂದಲು ಕತ್ತರಿಸುವ ಕತ್ತರಿಯನ್ನು ವಿಶೇಷವಾಗಿ ಪೂಜಿಸುತ್ತಾರೆ. ದಸರಾ ಹಬ್ಬದಲ್ಲಿ ಕಲಬುರಗಿಯ ಬಾಪು ನಗರದಲ್ಲಿ ಕುಸ್ತಿ ಪಂದ್ಯಾವಳಿಗಳು ನಡೆಯುತ್ತವೆ.

## ಪ್ರಾದೇಶಿಕ ವೈವಿಧ್ಯಗಳು

ಉತ್ತರ ಕರ್ನಾಟಕದಲ್ಲಿ ವಿಜಯದಶಮಿಯಲ್ಲಿ ಬರುವ ಸೀಗಿ ಹುಣ್ಣಿಮೆಯಲ್ಲಿ ಪಾಂಡವರ ಪೂಜೆ ಮಾಡುತ್ತಾರೆ. ಐದು ಕಲ್ಲುಗಳನ್ನು ಹೂಡಿ ಪೂಜೆ ಮಾಡುತ್ತಾರೆ. ಒಂದು ಕಲ್ಲನ್ನು ಕಣ್ಣಪ್ಪ (ಕರ್ಣ) ಎಂದೂ ಪೂಜಿಸುತ್ತಾರೆ. ಮಧ್ಯಕರ್ನಾಟಕದ ಹಲವಡೆ ಅಂಬಿನೋತ್ಸವ ನಡೆಯುತ್ತದೆ. ಹಿರಿಯೂರು ತಾಲ್ಲೂಕಿನ ಆದಿವಾಲದ ಯರಗುಂಟೇಶ್ವರ, ಕೂನಿಕೆರೆ ಗ್ರಾಮದ ಆಂಜನೇಯ ಸ್ವಾಮಿ, ವದ್ದೀಕೆರೆಯ ಭೈರವ, ಕಳವುಭಾಗಿ ಲಕ್ಷ್ಮಿ ರಂಗಸ್ವಾಮಿ ಮುಂತಾದ ಕಡೆಗಳಲ್ಲಿ ದಸರಾ ಹಬ್ಬದ ಕೊನೆಯ ದಿನ ಅಂಬಿನೋತ್ಸವ ಆಚರಿಸಲಾಗುತ್ತದೆ. ಈ ಆಚರಣೆಯನ್ನು ಕೆಲವು ಬುಡಕಟ್ಟು ಸಮುದಾಯಗಳು 'ಖಂಡೆಯ' ಪೂಜೆಯೆಂದೂ ಕರೆಯುತ್ತಾರೆ. ಮಾಂಸಾಹಾರಿಗಳು ಆ ದಿನ ಖಂಡೆ (ಮಾಂಸ)ದ ಪೂಜೆ ಮಾಡುವುದರಿಂದ 'ಖಂಡೆ ಪೂಜೆ' ಎಂಬ ಹೆಸರು ಬಂದಿರಬಹುದು. ಈ 'ಖಂಡೆ ಪೂಜೆ'ಯನ್ನು ರಾಜ ಮನೆತನದವರು ವೈಭವದಿಂದ ಆಚರಿಸುತ್ತಿದ್ದ ಬಗ್ಗೆ ಉಲ್ಲೇಖಗಳು ಸಿಗುತ್ತವೆ.

ಹೊಸದುರ್ಗ ತಾಲ್ಲೂಕಿನ ಕಂಚೀಪುರದಲ್ಲಿ ಕಂಚೀವರದ ದೇವರ ಹೆಸರಲ್ಲಿ ಮಹಾಲಯ ಅಮಾವಾಸ್ಯೆಗೂ ಮುನ್ನ ಉತ್ತರೆ ಮಳೆ ಬೀಳುವ ಅವಧಿಯಲ್ಲಿ ಬಿಲ್ಲು–ಬಾಣಗಳ ಉತ್ಸವ ನಡೆಸುತ್ತಾರೆ. ಈ ಉತ್ಸವದಲ್ಲಿ ದುಡ್ಡನ್ನು ತೂರಲಾಗುತ್ತದೆ. ಕೆಲವು ಜನರು ತೂರಿದ ಹಣವನ್ನು ಆರಿಸಿಕೊಳ್ಳುತ್ತಾರೆ. ಕೊಡವರು ಆಯುಧಪೂಜೆಯನ್ನು 'ಕೈಲ್ ಪೋಳ್ದ್' ಎನ್ನುತ್ತಾರೆ. ನವರಾತ್ರಿಯಲ್ಲಿ ವಿಶೇಷವಾಗಿ ಕೋವಿಗಳನ್ನು ಪೂಜೆ ಮಾಡುತ್ತಾರೆ. ನಂತರ ಆಕಾಶಕ್ಕೆ ಗುಂಡುಹಾರಿಸುವ ಮೂಲಕ ಸಂಭ್ರಮಿಸುತ್ತಾರೆ.

ಉತ್ತರ ಕರ್ನಾಟಕದ ಮೈಲಾರಲಿಂಗನ ಮನೆದೇವರ ಸಮುದಾಯಗಳಲ್ಲಿ ಮನೆಯಲ್ಲಿ ಹಾಲು ಕರೆವ ಎಮ್ಮೆ, ಹಸು ಇದ್ದರೆ ವಿಶೇಷ ಆಚರಣೆ ಮಾಡುತ್ತಾರೆ. ಪಂಚಮಿಯಿಂದ ನವಮಿಯವರೆಗೆ, ಇನ್ನು ಕೆಲವರು ಸಪ್ತಮಿಯಿಂದ ನವಮಿಯವರೆಗೆ ಹಾಲನ್ನು ಕಾಯಿಸಿ ಹೆಪ್ಪು ಹಾಕಿ ಆ ದೇವರ ಮುಂದೆ ಮೀಸಲಿಡುವರು. ನವಮಿಯ ದಿನ ಮೀಸಲಿಟ್ಟ ಮೊಸರನ್ನೆಲ್ಲಾ ಕಡೆದು ಬೆಣ್ಣೆ ಮಾಡಿ, ಅದನ್ನು ಕಾಯಿಸಿ, ತುಪ್ಪ ಬಂದ ಮೇಲೆ ಆ ಮೀಸಲು ತುಪ್ಪದಲ್ಲಿಯೇ ಮೈಲಾರ ದೇವರ ದೀವಟಿಗೆ ಉರಿಸುವರು. ಆ ದೀವಟಿಗೆ ಹಿಡಿಯುವ ವ್ಯಕ್ತಿ ವಿವಾಹಿತನಾಗಿರಬೇಕು.

ಆ ದಿನ ಆಹಾರ ಸೇವಿಸುವಂತಿಲ್ಲ. ಸಂಜೆಯಾಗುತ್ತಲೇ ಮಡಿವಂತನಾಗಿ, ಮಡಿ ಅರಿವೆಯನ್ನು ದೀವಟಿಗೆಗೆ ಸುತ್ತಿ ಮೀಸಲು ತುಪ್ಪವನ್ನು ಉಣಿಸಿ ದೀಪ ಹೊತ್ತಿಸುವರು. ಮನೆಯ ಜಗುಲಿಯಿಂದ ಗ್ರಾಮದೇವರವರೆಗೂ ದೀವಟಿಗೆಯನ್ನು ಉರಿಸುತ್ತ ಹೋಗಿ ಬರುವರು. ದೀವಟಿಗೆ ಹಿಡಿದ ವ್ಯಕ್ತಿ 'ಏಳಕೋಟಿ ಏಳಕೋಟಿ... ಏಳಕೋಟಿಗೊ' ಎಂಬ ಮೈಲಾರ ದೇವರ ನಾಮವನ್ನು ಕೂಗುವರು. ಮನೆ–ಮಂದಿ ಆ



ದಸರಾ ಮಹೋತ್ಸವ ಸಂದರ್ಭದಲ್ಲಿ ವಿದ್ಯುದ್ದೀಪಗಳಿಂದ ಕಂಗೊಳಿಸುವ ಮೈಸೂರು ಅರಮನೆ
ಚಿತ್ರ: ಅನೂಪ್ ರಾಘು ಟಿ.